## 12

# ಇತರ ವಿಚಾರಗಳು (2)

## ದೇವಾನುಗ್ರಹ

## (Providence)

ಕನಿಷ್ಠಪಕ್ಷ ಎರಡು "ಪರಿಶುದ್ಧ ಗ್ರಂಥದ" ಪದಗಳು ಪರಿಶುದ್ಧ ಬರಹಗಳಲ್ಲಿ ಕಂಡು ಬರುವದಿಲ್ಲ: "ತ್ರೈಯೇಕತ್ವ" ಮತ್ತು "ದೇವಾನುಗ್ರಹ." ದೇವರು "ದೇವತ್ವವಾಗಿದ್ದಾನೆ." ಒಂದು ಸಲವಾದರೂ ಪರಿಶುದ್ಧ ಬರಹಗಳಲ್ಲಿ ಬರೆಯಲ್ಪಟ್ಟಿರದಿದ್ದರೂ, "ದೇವಾನುಗ್ರಹ" ಎಂಬುದು ಪ್ರತಿಯೊಂದು ಪುಟದ ಮೇಲೆ ಪ್ರಕಟಿಸಲ್ಪಟ್ಟಿದೆ (ಫಿಲಿಪ್ಪಿ 2:13, 27; 2 ಕೊರಿಂಥ 3:5; 1 ಥೆಸಲೊನೀಕ 3:11; 1 ಕೊರಿಂಥ 10:11-13). "ನಿಜವಾಗಿ ಯೆಹೋವನು ಈ ಸ್ಥಳದಲ್ಲಿ ಇದ್ದಾನೆ; ಅದು ನನಗೆ ತಿಳಿಯದೆ ಹೋಯಿತು" (ಆದಿಕಾಂಡ 28:16) ಎಂದು ಯಾಕೋಬನು ಹೇಳಿದನು. "ನೀವಂತೂ ನನಗೆ ಕೇಡಾಗಬೇಕೆಂದು ಎಣಿಸಿದ್ದಿರಿ: ಆದರೆ ದೇವರು ಮೇಲಾಗಬೇಕೆಂದು ಸಂಕಲ್ಪಿಸಿದನು" (ಆದಿಕಾಂಡ 50:20ಎ) ಎಂದು ಯೋಸೇಫನು ಪ್ರಕಟಿಸಿದನು "ಇದಲ್ಲದೆ ನೀನು ಇಂಥ ಸಂದರ್ಭಕ್ಕಾಗಿಯೇ ಪಟ್ಟಕ್ಕೆ ಬಂದಿರಬಹುದು, ಯಾರು ಬಲ್ಲರು?" (ಎಸ್ತೇರ 4:14ಬಿ) ಎಂದು ಮೊರ್ದಕೈ ಎಸ್ತೇರಳನ್ನು ಕೇಳಿದನು. ಗುಬ್ಬಿಯು ಯಾವಾಗ ಬೀಳುವುದು ಎಂಬುದನ್ನು ದೇವರು ತಿಳಿದಿರುವನೆಂದು ಯೇಸು ಹೇಳಿದನು (ಮತ್ತಾಯ 10:29-31); ನಮ್ಮ ತಲೆಗಳ ಮೇಲಿನ ಕೂದಲುಗಳು ಎಣಿಸಲ್ಪಟ್ಟಿರುವವು. "ಜನಾಂಗಗಳು ಕಪಿಲೆಯಿಂದುದುರುವ ತುಂತುರಿನಂತೆ ಇರುವವು" (ಯೆಶಾಯ 40:15ಎ). ದೇವಾನುಗ್ರಹದ ಅಧ್ಯಯನವು ಮನಸ್ಸನ್ನು ವಿಸ್ತರಿಸುತ್ತದೆ. ಹಾಗೂ ಹೃದಯವನ್ನು ಬಿಸಿ ಮಾಡುತ್ತದೆ.

ದೇವರು ಒಳ್ಳೆಯವನು. ದೇವರು ಒದಗಿಸುತ್ತಾನೆ. ಸೈತಾನನು ಜೀವಿಸುತ್ತಿದ್ದಾನೆ ಮತ್ತು ಕಾರ್ಯ ಮಾಡುತ್ತಿದ್ದಾನೆ. ಆದರೆ ದೇವರು "ಮೀನು ಹಿಡಿಯಲಿಕ್ಕೆ ಹೋಗಿ ರುವದಿಲ್ಲ." ಆತನು ನಮ್ಮ ಜೀವಿತಗಳಲ್ಲಿಯೂ ಕೆಲಸಮಾಡುತ್ತಲಿರುತ್ತಾನೆ. ಕ್ರೈಸ್ತತ್ವವು Deism (ನಮ್ಮ ಜೀವಿತಗಳಲ್ಲಿ ದೇವರು ಕಾರ್ಯ ಮಾಡಲಾರನು ಎಂಬ ತತ್ವಜ್ಞಾನ) ಆಗಿರುವದಿಲ್ಲ. ದೇವರು ನಿಜವಾಗಿಯೂ ಸತ್ತು ಹೋಗಿರುವನೋ ಎಂಬ ರೀತಿಯಲ್ಲಿ ಬಹಳ ಕ್ರೈಸ್ತರು ಜೀವಿಸುತ್ತಿರುವರು. ಆದಾಗ್ಯೂ ಭಾನುವಾರ ಬರುವಾಗ ದೇವರ ಸಹಾಯಕ್ಕಾಗಿ ನಾವು ಯಾವಾಗಲೂ ಪ್ರಾರ್ಥಿಸುವೆವು.

ಹೆಚ್ಚಾದ ಜನರು ದೇವಾನುಗ್ರಹವನ್ನು ತಾವು ಬಯಸಿದ ರೀತಿಯಲ್ಲಿ ಪ್ರಾರ್ಥನೆಗೆ ಉತ್ತರ ದೊರೆತಿರುವಂಥದ್ದು ಎಂದು ಯೋಚಿಸುತ್ತಾರೆ. ಬಹುಶಃ, ಯೋಸೇಫನು ತನ್ನ ಸಹೋದರರಿಂದ ಮಾರಲ್ಪಟ್ಟಾಗ ಹಾಗೂ ಅವನು ಯಥಾರ್ಥನಾಗಿದ್ದರೂ ಐಗುಪ್ತದಲ್ಲಿ ಸೆರೆಮನೆಗೆ ಹಾಕಲ್ಪಟ್ಟಾಗ ಆ ಸಮಯದಲ್ಲಿ ದೈವ ಸಂಕಲ್ಪದ ಬಗ್ಗೆ ಯೋಚಿಸಲಿಲ್ಲ! ದೇವರು ತಾನು ಪ್ರೀತಿಸುವವರನ್ನೇ ಶಿಕ್ಷಿಸುತ್ತಾನೆ (ಇಬ್ರಿಯ 12:5-11). ಸಮಸ್ಯೆಗಳಿಂದ ತೆಗೆದು ಹಾಕಲ್ಪಟ್ಟ, ಆತ್ಮಿಕ ಉನ್ನತಿಯು ಬೆಳೆದುಕೊಂಡು ಹೋಗುವದರ ಬಗ್ಗೆ ಎಚ್ಚರಿಕೆಯಿಂದ ಇರಿ. ನೀವು ದೇವರ ಸಂಕಲ್ಪವನ್ನು ದೂರದಿಂದಲೇ ನೋಡ ಬಹುದು. ಆಶೀರ್ವಾದಗಳು ಬರುವಾಗ, ಎಲ್ಲಾ ಸ್ತೋತ್ರ, ಕೃತಜ್ಞತೆಗಳನ್ನು ದೇವರಿಗೆ ಸಮರ್ಪಿಸಿರಿ.

"ದೇವರು ತನ್ನ ಅದ್ಭುತಗಳನ್ನು ಮಾಡುವಲ್ಲಿ ರಹಸ್ಯವಾದ ಮಾರ್ಗದಲ್ಲಿ ದೇವರು ಚಲಿಸುತ್ತಾನೆ."[1] ಪರಿಶುದ್ಧ ಬರಹಗಳಲ್ಲಿ ಮಾಡಲ್ಪಟ್ಟ 667 ಭಿನ್ನಹಗಳಲ್ಲಿ 654 ಬಿನ್ನಹಗಳಿಗೆ ನಿರ್ದಿಷ್ಟವಾದ ಉತ್ತರಗಳಿವೆ. ಪ್ರಾರ್ಥನೆ ಮತ್ತು ದೇವರ ಸಂಕಲ್ಪವು ಬೇರ್ಪಡಿಸದಂಥವುಗಳಾಗಿವೆ. ದೇವರ ಸಂಕಲ್ಪವನ್ನು ಎಲ್ಲವನ್ನೂ ಕೂಡಲೇ ನೋಡಲಿಕ್ಕಾಗುವದಿಲ್ಲ. ಭವಿಷ್ಯವು (ವರ್ತಮಾನ ಕಾಲವೂ ಸಹ) ಸಾಮರ್ಥ್ಯಗಳಿಂದ ತುಂಬಿಕೊಂಡಿರುತ್ತದೆ. ನಿರ್ದಿಷ್ಟವಾದ ಸಂಗತಿಯು ಸಂಭವಿಸುವವರೆ, ಹೆಚ್ಚಾಗಿ ಯಾವುದೋ ಸಂಗತಿ ಸಂಭವಿಸಬಹುದು! "ಏನಾಗಿರುವುದೋ ಅದು ಅದಾಗಿರಬಹುದು, ಇಲ್ಲವೇ ಅದು ಇನ್ನೊಂದು ರೀತಿಯಲ್ಲಿ ಇರಬಹುದು" ಎಂದು ಯಾರೋ ಹೇಳಿದ್ದಾರೆ. ಅದು ಇನ್ನೊಂದು ರೀತಿಯಲ್ಲಿ ಅದು ಇಲ್ಲ ಎಂದು ನಿಮಗೆ ಹೇಗೆ ತಿಳಿಯುತ್ತದೆ? ಈ ದಿನಗಳಲ್ಲಿ ಒಂದು ಚಿಕ್ಕ ಮಾತು ಸುತ್ತುವರಿಯುತ್ತಲಿರುತ್ತದೆ: "Good Morning. This is God. ಇಂದು ನಾನು ನಿಮ್ಮ ಎಲ್ಲಾ ಸಮಸ್ಯೆಗಳನ್ನು ಬಗೆ ಹರಿಸು ವೆನು ... . ನನಗೆ ನಿಮ್ಮ ಸಹಾಯ ಬೇಕಾಗಿಲ್ಲ. ಇಂದು ನಿಮಗೆ ಮಹಾದಿನ ಇರಲಿ" ಇದನ್ನು ಗಂಡಾಂತರ ಕಾಲಿಯದನ್ನಾಗಿ ಮಾಡಲು ಇದರಲ್ಲಿ ಸಾಕಷ್ಟು ಸತ್ಯವಿದೆ. ದೇವರು ಕಾರ್ಯನಿರತನಾಗಿದ್ದಾನೆ. ಆತನು (ಮತ್ತು ನಾನು) ನನ್ನ ಎಲ್ಲಾ ಸಮಸ್ಯೆಗಳನ್ನು ಕೈಕೊಳ್ಳ ಬಹುದು. ನಾವು ದೇವರೊಂದಿಗೆ ಕಾರ್ಯಮಾಡುವವರಾಗಿದ್ದೇವೆ! ನಾವು ನಮ್ಮ ಭಾರಗಳನ್ನು ಹೊತ್ತುಕೊಂಡು ಹೋಗಬೇಕು (ಗಲಾತ್ಯ 6:5). ದೇವರಿಲ್ಲದೇ ನಾವು ಮಾಡಲಾರೆವು; ನಾವು ಇಲ್ಲದೆ, ದೇವರು ಮಾಡಲಾರನು. ನಾವು ರಜಾಕಾಲದಲ್ಲಿ ಇರುವದಿಲ್ಲ. ತೊಡಕಿನಲ್ಲಿ ಸಿಕ್ಕಿದ ಜಗತ್ತಿನಲ್ಲಿ ದೇವರೊಂದಿಗೆ ನಾವು ಕಾರ್ಯಮಾಡುತ್ತಿದ್ದೇವೆ. ದೈವ ಸಂಕಲ್ಪವು ಜವಾಬ್ದಾರಿಕೆಯಿಂದ ಒಂದು ತಪ್ಪಿಸಿಕೊಂಡು ಹೋಗುವಿಕೆಯಾಗಿರುವದಿಲ್ಲ. ಅದು "ಪ್ರತಿಯೊಂದನ್ನು ದೇವರ ಮೇಲೆ" ಹಾಕುವಂಥದ್ದಲ್ಲ. ನಾವು ದೇವರೊಂದಿಗೆ ಬಹಳ ವಾಗಿ ಸಂತೃಪ್ತರಾಗುವಾಗ, ದೇವರು ನಮ್ಮಲ್ಲಿ ಅತೀ ಹೆಚ್ಚಾಗಿ ಮಹಿಮೆ ಹೊಂದುತ್ತಾನೆ. ತನ್ನನ್ನು ದೇವರಿಗೆ ಕೊಡುವವನು ತನಗಾಗಿ ದೇವರನ್ನು ಹೊಂದಿಕೊಳ್ಳುತ್ತಾನೆ.

## ಉಪವಾಸ

"ಉಪವಾಸ ಮಾಡುವುದು" ಮತ್ತು "ಔತಣ ಮಾಡುವುದು" *ಎರಡನ್ನೂ* ಯೇಸುವು ಬೋಧಿಸಿದ್ದಾನೆ. "ನೀವು ಉಪವಾಸ ಮಾಡುವಾಗ ..." ಎಂದು ಆತನು ಹೇಳಿದನು (ಮತ್ತಾಯ 6:16ಎ). ಅನೇಕ ದೊಡ್ಡ ಬೈಬಲಿನ ನಾಯಕರು ಉಪವಾಸ ಮಾಡಿದರು. ಕೆಲವು ಸಂಗತಿಗಳು ಪ್ರಾರ್ಥನೆ ಮತ್ತು ಉಪವಾಸವಿಲ್ಲದೇ ಮಾಡಲ್ಪಡಲಾರವು ಎಂದು ಯೇಸು ಹೇಳಿದನು (ಮತ್ತಾಯ 17:21). ಆದಿ ಸಭೆಯು ಉಪವಾಸ ಮಾಡಿತು (ಅಪೊಸ್ತಲರ ಕೃತ್ಯಗಳು 13:1-3; 14:23). ಉಪವಾಸವು ದೇವ ಕೇಂದ್ರೀಯವಾಗಿದೆ. ದೇವರ ಬಗ್ಗೆ ಭಾವನೆಯು ಕುಗ್ಗಿ ಹೋಗುವಾಗ, ಉಪವಾಸವು ಇಲ್ಲವಾಗಿ ಹೋಗುವುದು. ಉಪವಾಸವು "ಒಳಗೆ" ಇರುವದಿಲ್ಲ. ಉಪವಾಸ ಮಾಡುವುದು ಕಷ್ಟಕರವಾದದ್ದಾಗಿರುತ್ತದೆ; ಸರಿಯಾದ ಕಾರಣಗಳಿಗಾಗಿ ಉಪವಾಸ ಮಾಡುವುದು ಇನ್ನೂ ಕಠಿಣವಾದದ್ದಾಗುತ್ತದೆ. ಯೂದಾಯದ ಜನರನ್ನು ಅವರ ಉಪವಾಸಗಳಿಗಾಗಿ ಖಂಡಿಸಿದನು (ಯೆಶಾಯ 58). ಯೇಸುವು ಕಪಟತನವನ್ನು ಖಂಡಿಸಿದನು (ಮತ್ತಾಯ 6). ಉಪವಾಸವು ನಮ್ಮ ಪ್ರಾರ್ಥನೆಗಳಿಗೆ ಉತ್ತರವನ್ನು ಸಂಪಾದಿಸಿಕೊಳ್ಳುವದಿಲ್ಲ.

ಉದಾರವಾದಿಗಳು ಇಂದು "ಉಪವಾಸದ" ಒಳಗೆ ಇರುವರು - ಆದರೆ ಗಂಭೀರ ವಾದ ರೀತಿಯಲ್ಲಿ ಅಲ್ಲ (ನಾಲ್ವತ್ತು ದಿನಗಳು). ಆತ್ಮಿಕತೆಯು ಭಕ್ತಿಯ ಪ್ರದರ್ಶನ ವಾಗಿರಬಾರದು; ಅದು ನವೀನತೆಗೆ ಇಳಿಸಲ್ಪಡಬಾರದು. ಪರಿಶುದ್ಧ ಬರಹಗಳಲ್ಲಿ

ಉಪವಾಸವು ರಹಸ್ಯದಲ್ಲಿರುತ್ತಿತ್ತು, ಅದು ವಿಶೇಷಕಾರಣಕ್ಕಾಗಿ ವಿಶೇಷ ಸಮಯವಾಗಿತ್ತು. ಅದು ಸಾಮಾನ್ಯವಾಗಿರಲಿಲ್ಲ ಇಲ್ಲವೇ ಅನುದಿನವೂ ಮಾಡಲ್ಪಡುತ್ತಿರಲಿಲ್ಲ. ಪ್ರಾರ್ಥನೆ ಮತ್ತು ಪರಿಶುದ್ಧಬರಹದ ಧ್ಯಾನದಂತನೆ - ಇರಲಿಲ್ಲ. ಉಪವಾಸವು ಸ್ವಯಂ ನಿಯಂತ್ರಣಕ್ಕಾಗಿ ದೇವರ ತರಬೇತಿಯು ತಳಹದಿಯಾಗಿತ್ತು. ನಾವು ಕೆಲವೊಂದು ಹೆಚ್ಚು ಉತ್ತಮ ವಾದದ್ದಕ್ಕಾಗಿ ಕೆಲವೊಂದು ಒಳ್ಳೆಯದನ್ನು ಬಿಟ್ಟು ಕೊಡುತ್ತೇವೆ (1 ಕೊರಿಂಥ 7:1-5). ಉಪವಾಸವು ವಿಧೇಯತೆಯ ಕೃತ್ಯವಾಗಿದೆ. ಅದು ರೂಢಿಯಲ್ಲಿ ಸ್ವಂತದ ಅಲ್ಲಗಳೆಯುವಿಕೆಯಾಗಿದೆ.

ಔತಣ ಮಾಡುವದಕ್ಕೆ ಸಮಯವಿದೆ, ಮತ್ತು ಉಪವಾಸ ಮಾಡಲಿಕ್ಕೆ ಸಮಯವಿದೆ. *ಎರಡನ್ನೂ* ಮಾಡಿರಿ! ನೀವು ಒಂದೇ ಸಲ ಬೆಳೆಯುವಿರಿ - *ಬಲವುಳ್ಳವರಾಗಿ ಮುಕ್ತಾಯಗೊಳಿಸಿರಿ!*

◇◇◇◇◇◇◇◇

# ಪರಲೋಕ

## ಕೊಲೊಸ್ಸೆ 3:1-4

> *"ನಾವು ಕಾಣುವಂಥದನ್ನು ಲಕ್ಷಿಸದೆ ಕಾಣದಿರುವಂಥದನ್ನು ಲಕ್ಷಿಸು ವವರಾಗಿದ್ದೇವೆ. ಕಾಣುವಂಥದು ಸ್ವಲ್ಪ ಕಾಲಮಾತ್ರ ಇರುವದು; ಕಾಣದಿರುವಂಥದ್ದು ಸದಾಕಾಲವೂ ಇರುವದು"; "ಭೂಮಿಯ ಮೇಲಿರುವ ನಮ್ಮ ಮನೆಯು ಅಂದರೆ ನಮ್ಮ ದೇಹವೆಂಬ ಗುಡಾರವು ಕಿತ್ತು ಹಾಕಲ್ಪಟ್ಟರೂ ದೇವರಿಂದುಂಟಾದ ಒಂದು ಕಟ್ಟಡವು ಪರಲೋಕದಲ್ಲಿ ನಮಗುಂಟೆಂದು ಬಲ್ಲೆವು. ಅದು ಕೈಯಿಂದ ಕಟ್ಟಿದ ಮನೆಯಾಗಿರದೆ ನಿತ್ಯವಾಗಿರುವಂಥದಾಗಿದೆ" (2 ಕೊರಿಂಥ 4:18; 5:1).*

ಪರಲೋಕ! ನನಗೆ, ಅತೀ ಅದ್ಭುತಕರವಾದ ಮತ್ತು ಅಗ್ರಾಹ್ಯವಾದ ಸತ್ಯವು ಚಾರ್ಲ್ಸ್ ಹೊಡ್ಜ್‌ನು (ನೀನೂ ಸಹ) ಪರಲೋಕದಲ್ಲಿರುವದನ್ನು ದೇವರು ಬಯಸುತ್ತಾನೆ ಎಂಬುದಾಗಿದೆ! ದೇವರು "ಯಾವನಾದರೂ ನಾಶವಾಗುವದರಲ್ಲಿ ಇಷ್ಟಪಡದೆ, ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದಾನೆ" (2 ಪೇತ್ರ 3:9); "ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರ ಬೇಕೆಂಬುದು ಆತನ ಚಿತ್ತವಾಗಿದೆ" (1 ತಿಮೊಥೆ 2:4). *ಯಾಕೆ?* ನಾವು ಪರಲೋಕದಲ್ಲಿ ಒಳಪಟ್ಟವರಾಗಿರುವದಿಲ್ಲ; ನಾವು ಅದಕ್ಕೆ ಅರ್ಹರಲ್ಲ. ಯಾವುದೇ ಮನುಷ್ಯನು ದೇವರ ಕಡೆ ನೋಡಿ, ಜೀವಿಸಲಾರನು. ಹೀಗಿದ್ದರೂ, ಕ್ರಿಸ್ತನಲ್ಲಿ - ಕ್ರಿಸ್ತನ ನಿಮಿತ್ತವಾಗಿ - ನಾವು ದೇವರ ಸನ್ನಿಧಿಯಲ್ಲಿ ಇರುವೆವು! ದಾವೀದನಂತೆ, ಅಂಥ ಜ್ಞಾನವು ನಮಗೆ ಬಹು ಆಶ್ಚರ್ಯವಾಗಿದೆ (ಕೀರ್ತನೆ 139:6). ನಾವು ದೇವರಾಗಿರುವದಿಲ್ಲ, ಆದರೆ ನಾವು ದೇವರಿಂದ ಸ್ವಾಗತಿಸಲ್ಪಡುವೆವು. ನಮ್ಮ ಮಿತಿಯುಳ್ಳ ಮನಸ್ಸುಗಳು ಇದನ್ನು ಗ್ರಹಿಸಿಕೊಳ್ಳಲಾರವು; ನಮ್ಮ ಶಬ್ದಕೋಶವು ಅದನ್ನು ತಿಳಿಸಲಾರದು. ಇದು ರೋಮಾಂಚನಗೊಳಿಸುತ್ತದೆ ... ದೀನರನ್ನಾಗಿ ಮಾಡುತ್ತದೆ. *Amazing grace! To God alone be the glory!*

## ಪರಲೋಕಕ್ಕೆ ಹೋಗುವದನ್ನು ನಾವು ಬಯಸತಕ್ಕದ್ದು

ದೇವರೊಂದಿಗಿನ ನಮ್ಮ ಅನುದಿನದ ನಡೆಯು ಪರಲೋಕದಲ್ಲಿ ಮಾತ್ರವೇ ಅಂತ್ಯಗೊಳ್ಳತಕ್ಕದ್ದು! ಅನಂತರದ ಜೀವಿತವು ಅನಂತರದ ವಿಚಾರವಾಗಿರಲಾರದು. ಯಾರೂ ಒಂದು ದಿನ ಪರಲೋಕದಲ್ಲಿ ಆಕಸ್ಮಿಕವಾಗಿ ಎಚ್ಚರಗೊಳ್ಳಲಾರರು. "ಪ್ರತಿಯೊಬ್ಬರು ಪರಲೊಕಕ್ಕೆ ಹೋಗಲು ಬಯಸುತ್ತಾರೆ, ಆದರೆ ಯಾರೂ ಸಾಯಲಿಕ್ಕೆ ಬಯಸುವದಿಲ್ಲ" ಎಂದು ಯಾರೋ ಹಾಸ್ಯದಿಂದ ಹೇಳಿದರು. ಆದುದರಿಂದ ನಮ್ಮ ಹೇಳಿಕೆಯು ತಿದ್ದುಪಡಿಮಾಡಲ್ಪಡಬೇಕು: "ಭೂಲೋಕದ ಮೇಲೆ ಯಾವುದೇ ಸಂಗತಿಗಿಂತ ಹೆಚ್ಚಾಗಿ ಪರಲೋಕಕ್ಕೆ ಹೋಗುವದನ್ನು ನೀನು ಬಯಸತಕ್ಕದ್ದು." ಅದು ಆಹ್ವಾನವಾಗಿರುತ್ತದೆ! ಆದಿ ಸಭೆಯು ಪರಲೋಕದೊಂದಿಗೆ ಪೂರ್ವ ಭಾವಿಯಾಗಿ ತುಂಬಿಕೊಂಡಿದ್ದರೂ ಪರಲೋಕದ ಬಗೆಗಿನ ಸಿದ್ಧಾಂತವು ಇಂದು ಅತೀ ಹೆಚ್ಚಾಗಿ ಕಡೆಗಣಿಸಲ್ಪಟ್ಟ ಸಿದ್ಧಾಂತಗಳಲ್ಲಿ ಒಂದಾಗಿದೆ.

ಈ ಅಂಶವು - ಪರಲೋಕದ ನಮ್ಮ ತತ್ವದೊಂದಿಗೆ ಮತ್ತು ನಮ್ಮ ದೈನಂದಿನ ನಡೆಯೊಂದಿಗೆ ಎರಡಕ್ಕೂ ನಿರ್ಣಾಯಕವಾದದ್ದಾಗಿದೆ. ಪರಲೋಕದೊಳಗೆ ಪ್ರವೇಶಿಸುವುದು ಸಮಸ್ಯೆಯಾಗಿರುವದಿಲ್ಲ, ಆದರೆ ಪರಲೋಕವನ್ನು ನಮ್ಮೊಳಗೆ ತರುವುದಾಗಿದೆ!

"ಪರಲೋಕಕ್ಕೆ ಏನು ಸಂಭವಿಸಿತು?" ಎಂದು ಕೇಳುವದರಿಂದ *ಟೈಮ್* ಮ್ಯಾಗಝೀನ್ ಒಂದು ಆವೃತ್ತಿಯು ಒಂದು ಅಗ್ರ ಲೇಖನದಿಂದ ಮತ್ತು ಮುಖ ಪುಟದಿಂದ ಈ ವಿಷಯದ ಮೇಲೆ ಕೇಂದ್ರೀಕರಿಸಿತು.[2] ಧರ್ಮವು "ಒಳಗೆ" ಇರುವುದು; ಆತ್ಮಿಕತೆಯು ಇಂದು ಹಿಂದಿರುಗಿ ಬಂದಿರುವುದು. ಹೀಗಿದ್ದರೂ, ಪರಲೋಕದ ಬಗ್ಗೆ ಯಾವುದೇ ಮಾತು ಇರುವುದಿಲ್ಲ. ನಾವು ಪಂದ್ಯಾಟಗಳ ಬಗ್ಗೆ, ಹವಾಮಾನದ ಬಗ್ಗೆ, ಮಾರ್ಕೇಟಿನ ಬಗ್ಗೆ ಮಾತಾಡುತ್ತೇವೆ - ಆದರೆ ಪರಲೋಕದ ಬಗ್ಗೆ ಮಾತಾಡುವದಿಲ್ಲ. ದೇವದೂತರುಗಳು "ಒಳಗೆ" ಇರುವರು; ಆದರೆ ಅವರ ಮನೆಯು "ಪರಲೋಕವು" ಹೊರಗೆ ಇರುವುದು. ಹಿಬ್ರೂ ಭಾಷೆಯಲ್ಲಿ "ಏಂಜಲ್" ಎಂಬ ಪದಕ್ಕೆ "ಸಂದೇಶ ಕೊಡುವವ" ಎಂದು ಅರ್ಥವಿರುತ್ತದೆ. ತಮ್ಮನ್ನು ಕಳುಹಿಸಿದ ದೇವರಲ್ಲಿ ಆಳವಾದ ಆಸಕ್ತಿಯಿಲ್ಲದ ದೇವದೂತರೊಂದಿಗೆ ನಾವು ನಮ್ಮನ್ನು ಹೇಗೆ ಮರುಳುಗೊಳ್ಳಿಸಬಹುದು? *ಟೈಮ್* ಪತ್ರಿಕೆಯು ನಮ್ಮನ್ನು ಕಪಟಿಗಳೆಂದು ದೂರಿತು.

ಧರ್ಮದೊಂದಿಗಿನ ನಮ್ಮ ಬಡ ಮರುಳುಗೊಳಿಸುವಿಕೆಯು ಪರಿಶುದ್ಧ ಬರಹ ಮತ್ತು ಸತ್ಯದೊಂದಿಗಿಂತ - ಹೆಚ್ಚಾಗಿ ಅಜ್ಞಾನ ಮತ್ತು ಮೂಢಭಕ್ತಿಯ ಮೇಲೆ ಅವಲಂಭಿಸಿರುತ್ತದೆ. ಜನರು "ಕಾವಲು ದೂತರನ್ನು" ತಮ್ಮ ಹೆಗಲ ಮೇಲೆ ಹೊತ್ತುಕೊಳ್ಳುತ್ತಾರೆ ಮತ್ತು ತಮ್ಮ ತೋಳುಗಳ ಮೇಲೆ "ಪ್ರಾರ್ಥನೆಯ ಬ್ರೇಸ್‌ಲೆಟ್"ಗಳನ್ನು ಧರಿಸಿಕೊಳ್ಳುತ್ತಾರೆ. ಆದಾಗ್ಯೂ ಅವರ ಜೀವಿತಗಳು ಬದಲಾಗದೇ ಇರುತ್ತವೆ. ಜನರು ಅಗಾಧವಾದ ವಿಶ್ವಾಸಕ್ಕಿಂತ ಹೆಚ್ಚಾಗಿ ಆಧ್ಯಾತ್ಮಿಕತೆಯನ್ನು ಅಪೇಕ್ಷಿಸುತ್ತಾರೆ. ಟೈಮ್ ಪತ್ರಿಕೆಯಲ್ಲಿ ವರದಿ ಮಾಡಿದ ಹೇಳಿಕೆಗಳನ್ನು ನಾವು ಗಮನಿಸತಕ್ಕದ್ದು! ಹೆಚ್ಚಾದ ನಂಬಿಗಸ್ತ ಕ್ರೈಸ್ತರು ಪರಲೋಕದ ಬಗ್ಗೆ ಹೇಳದೇ ಒಂದಾಗಿ ಕೂಡಿಬಂದು ಅನ್ಯೋನ್ಯತೆಯನ್ನು ಅನುಭವಿಸುತ್ತಾರೆ. ನಾವು ಅದನ್ನು ಎದುರಿಸೋಣ: ನಾವು ಮನೆಯ "ಹಂಬಲವುಳ್ಳವರಾಗಿರುವದಿಲ್ಲ." ನಾವು ಇಲ್ಲಿ ಭೂಲೋಕದಲ್ಲಿ ಬಹಳಷ್ಟನ್ನು ಕೂಡಿಟ್ಟಿದ್ದೇವೆ. ನಾವು *ಬಹಳಷ್ಟರೊಂದಿಗೆ* ಜೀವಿಸಬೇಕಾಗುತ್ತದೆ ಮತ್ತು *ಜೀವಿಸಲಿಕ್ಕಾಗಿ* ಸಾಕಷ್ಟು ಇರುವುದಿಲ್ಲ. ನಮಗೆ ಬೇಕಾದ ಎಲ್ಲವೂ ಇಲ್ಲಿದ್ದರೆ, ಬಿಟ್ಟು ಹೋಗುವುದು ಕಠಿಣವಾದದ್ದಾಗುತ್ತದೆ.

ಪರಲೋಕದ ಬಗ್ಗೆ ಸಂಗೀತಗಳು ಕೆಲವೇ ಇದ್ದು ಭಾವಾತಿರೇಕವುಳ್ಳವುಗಳಾಗಿವೆ.

ಬಡವರು ಮತ್ತು ಹೊರಗೆ ಹಾಕಲ್ಪಟ್ಟವರು ಮಾತ್ರವೇ ಪರಲೋಕದ ಬಗ್ಗೆ ಸಂಗೀತಗಳನ್ನು ಬರೆಯುವರು ಮತ್ತು ಹಾಡುವರು. ಯಶಸ್ವಿಯಾದ ಜನರು ತಾವು ಇಲ್ಲಿ ಭೂಮಿಯಮೇಲೆ "ಅದನ್ನು ಮಾಡಿರುವೆವು" ಎಂದು ಯೋಚಿಸುವರು. ನಾನು ಬಹಳ ಚಿಕ್ಕವನಾಗಿದ್ದಾಗ, ನನ್ನ ಮನಸ್ಸನ್ನು ತಟ್ಟಿದ ಒಂದು ಹೇಳಿಕೆಯನ್ನು ಓದಿದೆನು: "ಪ್ರತಿದಿನ ಪರಲೋಕದ ಬಗ್ಗೆ ಮೂವತ್ತು ನಿಮಿಷ ಯೋಚಿಸಿರಿ." ನಾನು ಯುವಕನಾಗಿದ್ದಾಗ, ನಾನು ಇದನ್ನು ಗ್ರಹಿಸಿಕೊಳ್ಳಲಿಕ್ಕಾಗಲಿಲ್ಲ; ಈಗ ನಾನು ವಯಸ್ಕನಾಗಿದ್ದುದರಿಂದ, ಅದು ಹೆಚ್ಚು, ಹೆಚ್ಚು ಅರ್ಥಕೊಡುತ್ತದೆ. "ನಿನ್ನ ಗುಡಾರದ ಗೂಟಗಳನ್ನು ಬಹಳ ಆಳವಾಗಿ ಜಡಿಯಬೇಡಿರಿ!" ಆದಿ ಸಭೆಯು ಒಂದಾಗಿ ಕೂಡಿಬಂದು "ಮಾರನಾತ!" ಎಂದು ಕೂಗುತ್ತಾ, ಪ್ರಾರ್ಥಿಸಿತು ("ಕರ್ತನಾದ ಯೇಸುವೇ, ಬಾ!"). ಹೊಸ ಒಡಂಬಡಿಕೆಯು "ಕರ್ತನಾದ ಯೇಸುವೇ, ಬಾ, ಆಮೆನ್" ಎಂಬುದರೊಂದಿಗೆ ಮುಕ್ತಾಯಗೊಳ್ಳುತ್ತದೆ (ಪ್ರಕಟನೆ 22:20ಬಿ). ಭವಿಷ್ಯಕ್ಕಾಗಿ ಎಲ್ಲಿ ನಿರೀಕ್ಷೆಯಿಲ್ಲವೋ ಅಲ್ಲಿ ವರ್ತಮಾನ ಕಾಲಕ್ಕಾಗಿ ಬಲವಿರುವದಿಲ್ಲ. ಪರಲೋಕದೊಳಗೆ ನಮ್ಮನ್ನು ಒಯ್ಯುವುದು ಸಮಸ್ಯೆಯಾಗಿರುವದಿಲ್ಲ, ಆದರೆ ನಮ್ಮಲ್ಲಿ ಪರಲೋಕವನ್ನು ತರುವುದು ಸಮಸ್ಯೆಯಾಗಿದೆ.

## ನಾನು ಪರಲೋಕಕ್ಕೆ ಹೋಗಲು ಬಯಸುತ್ತೇನೆ - ಯಾಕಂದರೆ ನಾನು ನರಕಕ್ಕೆ ಹೋಗಲು ಬಯಸುವದಿಲ್ಲ

ನಾಲ್ಕು ಅಕ್ಷರಗಳ "hell" ಎಂಬ ಪದವನ್ನು ಕೇಳುವಾಗ ಏದುಸಿರು ಬಿಡುತ್ತಾರೆ. ಅದು ಹೊರಗೆ ಹಾಕಲ್ಪಟ್ಟ ಪದವಾಗಿದೆ. ನಮ್ಮ ಸಂಸ್ಕೃತಿಯಲ್ಲಿ "ಬೇಡ - ಬೇಡ" ಎಂಬುದಾಗಿದೆ. ಹೌದು, ಅದು ಇನ್ನೂ ಶಾಪಗ್ರಸ್ತ ಜಗತ್ತು ಆಗಿರುತ್ತದೆ. ಆದರೆ ನಿಜವಾದ ನರಕದ ವಿಚಾರವು ನಮ್ಮ ಆಧುನಿಕ ಸಮಾಜಕ್ಕಾಗಿ ಅತೀ ಪುರಾತನವಾದದ್ದಾಗಿದೆ. ದೇವರ ಕೋಪ, ನ್ಯಾಯತೀರ್ವಿಕೆ, ಮತ್ತು ಜವಾಬ್ದಾರಿಕೆ "ಹೊರಗೆ" ಇರುತ್ತದೆ. ಕಠಿಣವಾದ ಪ್ರಸಂಗವು "ಹೊರಗೆ" ಇರುತ್ತದೆ. ಹೀಗಿದ್ದರೂ, ಪರಲೋಕ ಮತ್ತು ನರಕ ಒಂದಾಗಿ ನಿಲ್ಲುತ್ತವೇ ಇಲ್ಲವೇ ಒಂದಾಗಿ ಬಿದ್ದು ಹೋಗುತ್ತವೆ; ಒಂದು ಇನ್ನೊಂದನ್ನು ಕೇಳುತ್ತವೆ. ಜನರು ಏನನ್ನೇ ಹೇಳಲಿ, "ನರಕವೂ" ಇನ್ನೂ ಬೈಬಲಿನಲ್ಲಿ ಇರುತ್ತದೆ. ನರಕದ ಮೇಲಿನ ಪ್ರಸಂಗಗಳು ಬಹಳ ಸಲ ಬಿಡಲ್ಪಡುವದಿಲ್ಲ ಮತ್ತು ಪರಲೋಕದ ಮೇಲೆ ಬಹಳ ಸ್ವಲ್ಪ ಪ್ರಸಂಗಗಳಿರುತ್ತವೆ. ಹೀಗಿದ್ದರೂ, 550 ವಚನಗಳಲ್ಲಿ (KJV) ಪರಲೋಕಕ್ಕೆ 582 ಉಲ್ಲೇಖಗಳಿರುತ್ತವೆ. ಕ್ರೈಸ್ತರಲ್ಲಿಯೂ ಸಹ ಪರಲೋಕದ ಬಗ್ಗೆ ಆಸಕ್ತಿಯು ಕಡಿಮೆಯಾಗುತ್ತಿದೆ? ಇಲ್ಲಿ ಭೂಲೋಕದ ಮೇಲೆ ಜೀವಿತವು ಅಷ್ಟು ಒಳ್ಳೆಯದಾಗಿರುವುದು ಕಾರಣವೋ?

"ನರಕವು" ಇನ್ನೂ ಪರಿಶುದ್ಧ ಬರಹಗಳಲ್ಲಿರುವುದು. ಯೇಸುವು ತಾನು ನಂಬಿದ್ದನ್ನು ಮತ್ತು ಬೋಧಿಸಿದ್ದನ್ನು ಅಲ್ಲಗಳೆಯುವಾಗ ನೀನು ಆತನಲ್ಲಿ ನಂಬಬಹುದೋ? ಯೇಸುವು ನರಕದಲ್ಲಿ ನಂಬಿದನು; ಬೈಬಲಿನ ಎಲ್ಲಾ ಬರಹಗಾರರನ್ನು ಕೂಡಿಸಿ ನರಕದ ಬಗ್ಗೆ ಹೇಳಿದ್ದಕ್ಕಿಂತಲೂ ಹೆಚ್ಚಾಗಿ ಆತನು ಬೋಧಿಸಿದನು. KJVಯಲ್ಲಿ "ನರಕದ" ಬಗ್ಗೆ ಹಲವಾರು ಉಪಯೋಗಗಳಿವೆ, "ಮರಣ" "ನರಕ" ಮತ್ತು "ಪಾತಾಳ" ಎಂದರ್ಥಗಳಿವೆ. ಹೀಗಿದ್ದರೂ, "ನರಕದ ಬೆಂಕಿ"ಗಾಗಿ ವಿಶಿಷ್ಠ ಪದವು ಹೊಸ ಒಡಂಬಡಿಕೆಯಲ್ಲಿ ಹನ್ನೆರಡು ಸಲ ಕಂಡುಬರುತ್ತದೆ. ಆ ಹನ್ನೆರಡು ಸಲಗಳಲ್ಲಿ ಯೇಸುವು ಆ ಪದವನ್ನು ಹನ್ನೊಂದು ಸಲ ಉಪಯೋಗಿಸಿದನು! (ಓದಿರಿ ಮತ್ತಾಯ

5:22; 10:28; 18:9; 23:33.) ನರಕವು ಗಂಭೀರವಾದ ವ್ಯವಹಾರವಾಗಿದೆ: ನೀವು ನರಕಕ್ಕೆ ಹೋಗಬಹುದು; ನಾನು ನರಕಕ್ಕೆ ಹೋಗಬಹುದು.

ಆಧುನಿಕ ಸಂಸ್ಕೃತಿಯು ಸಾರ್ವತ್ರಿಕತೆಯಿಂದ (ಎಲ್ಲರೂ ರಕ್ಷಿಸಲ್ಪಡುವರು ಎಂಬ ವಿಚಾರ) ನುಂಗಲ್ಪಟ್ಟಿರುತ್ತದೆ. "ನಿನ್ನನ್ನು ನರಕಕ್ಕೆ ಕಳುಹಿಸದಷ್ಟು ದೇವರು ಒಳ್ಳೆಯವನಾಗಿದ್ದಾನೆ. ನೀವು ನರಕಕ್ಕೆ ಹೋಗದಷ್ಟು ಒಳ್ಳೆಯವರಾಗಿದ್ದೀರಿ" ಎಂದು ವಿಶ್ವವ್ಯಾಪಕವು ಘೋಷಿಸುತ್ತದೆ. ಈ ಹೇಳಿಕೆಯು ಸುಳ್ಳಾದದ್ದಾಗಿರುವದಲ್ಲದೆ, ಇದು ದೇವಧೂಷಣೆಯೂ ಆಗಿರುತ್ತದೆ. "ಸಾಕಷ್ಟು ಒಳ್ಳೆಯದು" ಎಂದೂ ಇರುವದಿಲ್ಲ. 99.999999999 ... ಶತವನ್ನು ನಾನು ಸಮಾಧಿಯ ಇತರ ಕಡೆಯಲ್ಲಿ ನನ್ನ ಜೀವಿತವನ್ನು ಕಳೆಯುವದರಿಂದ, ನಾನು ಸಾಯುವ ಮೊದಲು ನಾನು ಎಲ್ಲಿಗೆ ಹೋಗುವೆನೆಂದು ತಿಳಿಯಲು ಬಯಸುತ್ತೇನೆ! ಪರಲೋಕದ ನಿಮಿತ್ತವಾಗಿ ಭೂಲೋಕದ ಮೇಲೆ ನೀನು ಏನು ಮಾಡುತ್ತಿರುವಿ? ನಾನು ಪರಲೋಕಕ್ಕೆ ಹೋಗಲು ಬಯಸುತ್ತೇನೆ ಯಾಕಂದರೆ ನಾನು ನರಕಕ್ಕೆ ಹೋಗಲು ಬಯಸುವದಿಲ್ಲ!

## ಪರಲೋಕವಿಲ್ಲದೆ – ಭೂಲೋಕಕ್ಕೆ ಯಾವ ಅಧಿಕಾರವಿರುವದಿಲ್ಲ

ಸ್ತೆಫನನು ತನ್ನ ಕ್ರೈಸ್ತತ್ವದ ಪ್ರೌಢಾವಸ್ಥೆಯಿಂದ ಆಶ್ಚರ್ಯಗೊಳಿಸುತ್ತಾನೆ. ಪ್ರಥಮ ಕ್ರೈಸ್ತ ಹತಸಾಕ್ಷಿಯು ಕ್ರಿಸ್ತನು ಮಾಡಿದಂತೆ ತನ್ನ ವೈರಿಗಳನ್ನು ಕ್ಷಮಿಸಿದನು (ಅಪೊಸ್ತಲರ ಕೃತ್ಯಗಳು 7:60). ಎಂಥಾ ನಂಬಿಕೆ! ಎಂಥಾ ಧೈರ್ಯ! ಅವನು ಅದನ್ನು ಹೇಗೆ ಮಾಡಿದನು? "ಆದರೆ ಅವನು ಪರಿಶುದ್ಧಾತ್ಮ ಭರಿತನಾಗಿ ಆಕಾಶದ ಕಡೆಗೆ ದೃಷ್ಟಿಸಿ ನೋಡಿ ದೇವರ ಪ್ರಭಾವವನ್ನೂ ದೇವರ ಬಲಗಡೆಯಲ್ಲಿ ನಿಂತಿರುವದನ್ನೂ ನೋಡಿದನು" (ಅಪೊಸ್ತಲರ ಕೃತ್ಯಗಳು 7:55). ಪರಲೋಕವು ನಮ್ಮ ಹೃದಯದಲ್ಲಿರುವಾಗ ಮಾತ್ರವೇ ಭೂಲೋಕದ ಕಡೆಗಿರುವ ನಮ್ಮ ದೃಷ್ಟಿಕೋನವು ಸರಿಯಾಗಿರುವುದು. ಕೇವಲ ಹತ್ತು ಸೆಕೆಂಡುಗಳಿಗಾಗಿ ನಾವು ಪರಲೋಕವನ್ನು ನೋಡುವುದಾದರೆ. ಭೂಲೋಕವು ಒಂದು ಸಮಸ್ಯೆಯಾಗಿರಲಾರದು (2 ಕೊರಿಂಥ 4:16-18).

ಒಬ್ಬ ವ್ಯಕ್ತಿಯ ಬಗ್ಗೆ, "ಅವನು ಬಹಳವಾಗಿ ಪರಲೋಕದ ಭಾವನೆಯುಳ್ಳವನಾಗಿದ್ದಾನೆ; ಅವನು ಭೂಲೋಕದ ಬೆಲೆಯಿಲ್ಲದವನಾಗಿದ್ದಾನೆ" ಎಂದು ಹೇಳುವದನ್ನು ಕೇಳಿದ್ದೇನೆ. ಪಾರಲೌಕಿಕ ಮನೋಭಾವನೆಯುಳ್ಳವರಾಗಿರುವದನ್ನು ಬಾಲಿಶ ಆದರ್ಶದ ಬಗ್ಗೆ ಇಲ್ಲವೇ ಮೂರ್ಖತನದ ಬಗ್ಗೆ ಗಲಿಬಿಲಿಪಡಿಸದಿರಿ. ನೀವು ಅತಿಯಾಗಿ ಪಾರಲೌಕಿಕ ಭಾವನೆಯುಳ್ಳವರಾಗಿರಲಾರಿರಿ! ಪಾರಲೌಕಿಕ ಮನೋಭಾವನೆಯು ಭೂಮಿಯ ಮೇಲೆ ಬಹಳವಾಗಿ ವ್ಯಾವಹಾರಿಕ ಸಂಗತಿಯಾಗಿದೆ. ಲೌಕಿಕ ಕ್ರೈಸ್ತರೊಳಗೆ, ಅದು ಬಹಳ ಸಲ ಹೇಳಲ್ಪಡುತ್ತದೆ, "ಪರಲೋಕದ ಒಳ್ಳೆತನವಿರದಷ್ಟು, ಅವನು ಭೂಲೋಕದ ಮನಸ್ಸುಳ್ಳವನಾಗಿದ್ದಾನೆ." ಯೇಸುವು ಪಾರಲೌಕಿಕ ಮನಸ್ಸುಳ್ಳವನಾಗಿದ್ದನು. ಭೂಲೋಕವನ್ನು ನಿರ್ವಹಿಸಲು ಸ್ತೆಫನನು ಪರಲೋಕದ ಕಡೆಗೆ ನೋಡಿದನು. ಪೌಲನು ತನಗೆ ಲಾಭವಾಗಿದ್ದಂಥವುಗಳನ್ನು ಕಸವೆಂದೆಣಿಸಿದನು (ಫಿಲಿಪ್ಪಿ 3:7, 8).

ತನ್ನ ಮರಣಕ್ಕಿಂತ ಹಲವಾರು ವರ್ಷಗಳ ಮೊದಲು, ನಮ್ಮ ಪ್ರೀತಿಯ ಸಹೋದರ ಲ್ಯಾನ್ಸಿ ಹೆನ್ನಿಂಜರನು ನಮ್ಮ ವೈಯಕ್ತಿಕ ವಿಶ್ವಾಸದ ಮೇಲೆ ಒಂದು ಚಿಕ್ಕ ಹೇಳಿಕೆಯನ್ನು ಬರೆಯಲು ಒಂದು ಸಭೆಯ ಪತ್ರಿಕೆಯ ಲೇಖನದಲ್ಲಿ ನಮ್ಮನ್ನು ಆಹ್ವಾನಿಸಿದನು.[3] ನೀವು ಎಲ್ಲಿ ಪ್ರಾರಂಭಿಸುವಿರಿ? ನೀವು ಏನನ್ನು ಕೂಡಿಸುವಿರಿ? ಕೆಲವು ದಿನ ಇದರ ಬಗ್ಗೆ ಯೋಚಿಸಿ ಅನಂತರ ನಮ್ಮ ಹೃದಯಗಳ ತಳದಲ್ಲಿ ಇರುವಂಥದ್ದನ್ನು ಬರೆಯಿರಿ

ಎಂದು ಆಜ್ಞಾಪಿಸಿದನು. ಆ ಮೇಲೆ ಅದನ್ನು ತೆಗೆದುಕೊಂಡು ಸ್ವಲ್ಪ ಸಮಯದ ನಂತರ ಅದನ್ನು ಪುನಃ ಓದಬೇಕು, ಅದನ್ನು ಸುಧಾರಿಸಬೇಕು, ಮತ್ತು ಅದನ್ನು ಬದಲಾಯಿಸಬೇಕು ಎಂದು ಹೇಳಿದನು. ಪರಲೋಕವಿಲ್ಲದೆ, ಭೂಲೋಕಕ್ಕೆ ಯಾವ ಅರ್ಥ ಇರುವದಿಲ್ಲ.

## ಪರಲೋಕವು ಒಂದು ಸ್ಥಳವಾಗಿದೆ – ಆದರೂ ಒಂದು ಸ್ಥಳಕ್ಕಿಂತ, ಒಬ್ಬ ವ್ಯಕ್ತಿಗಿಂತ ಹೆಚ್ಚಿನದಾಗಿದೆ

ಪರಲೋಕವು, ಅನುಭವವು ನಿರೀಕ್ಷೆಗಳನ್ನು ದಾಟಿಹೋಗುವಂಥ ಕೇವಲ ಸ್ಥಳ ವಾಗಿರುತ್ತದೆ. ಹೆಚ್ಚಾದ ನಮ್ಮ ಘಟನೆಗಳು ಮತ್ತು ವಿರಾಮಕಾಲಗಳು ವಿರುದ್ಧವಾದ ಅಂತ್ಯ ಹೊಂದುವವೂ ಎಲ್ಲಾ ರೀತಿಯ ನಿರೀಕ್ಷೆಯ ನಂತರ, ನಾವು ಹೆಚ್ಚಾದ ಸಂಗತಿಗಳಿಂದ ನಾವು ನಿರಾಶರಾಗಿ ಬರುವೆವು. ಪರಲೋಕವು ನಿರಾಶೆಗೊಳಿಸುವದಿಲ್ಲ! ನಾವು ಪರಲೋಕವನ್ನು ಕಡಿಮೆಯಾಗಿ ತೀರ್ಮಾನಿಸಬಾರದು. ಅದು ಪಾರಲೌಕಿಕ ರಜಾಕಾಲಕ್ಕಿಂತ ಹೆಚ್ಚಾಗಿರುವುದು. ಪರಲೋಕದಲ್ಲಿ ಮುಖ್ಯವಾದ ಸೇವೆಯು ಆರಾಧನೆಯಾಗಿರುವುದು. ಭೂಲೋಕದಲ್ಲಿ ಯಾವುದೂ ಸಾಕಷ್ಟಾಗಿ ಪರಲೋಕದ ಮಹಿಮೆಗಳನ್ನು ಪ್ರತಿನಿಧೀಕರಿಸಲಾಗದು. ಕೆಲವರು ಪರಲೋಕದ ದೇವರಿಗಿಂತ ಹೆಚ್ಚಾಗಿ ಪರಲೋಕದ "ಬಂಗಾರ"ವನ್ನು ಅಪೇಕ್ಷಿಸುವರು! ಬಂಗಾರದ ಬೀದಿಯಿಂದ ಯಾವ ವ್ಯಾವಹಾರಿಕ ಉಪಯೋಗವಿರುವುದು? ಮನುಷ್ಯನಿಗೆ ಅತಿಯಾಗಿ ಅಮೂಲ್ಯವಾದದ್ದು ಪರಲೋಕಕ್ಕೆ ಬೆಲೆಯಿಲ್ಲದ್ದಾಗಿದೆ ಎಂದು ದೇವರು ನಮಗೆ ಹೇಳುತ್ತಾನೆ. ಮುತ್ತು ರತ್ನಗಳಿಂದ ಅಲಂಕರಿಸಿ ದ್ವಾರದ ಮತ್ತು ಗೋಡೆಗಳ ಬಗ್ಗೆ ಏನು? ನಮ್ಮ ಅತೀ ದೊಡ್ಡ ಮುತ್ತುಗಳು ಪರಲೋಕದಲ್ಲಿ ಕೇವಲ ಗೋಡೆಗಳಿಗೆ ಮತ್ತು ದ್ವಾರಗಳಿಗೆ ಉಪಯೋಗಿಸಲ್ಪಟ್ಟಿರುವವು. ಮನುಷ್ಯನು ಅದರ ಮಹಿಮೆಯನ್ನು ಕಲ್ಪಿಸಲಾರನು. ಅದು ಸುಂದರವಾಗಿರುವುದು, ಸಮಾಧಾನದಿಂದ ಇರುವುದು, ಅದ್ಭುತಕರವಾದದ್ದಾಗಿರುವುದು! ನಾವು ಯಾವುದಕ್ಕಾಗಿ ಮುನೋಡಬೇಕೆಂಬುದನ್ನು ತಿಳಿದಿರತಕ್ಕದ್ದು; ನಾವು ನಿಜವಾಗಿಯೂ ಅದನ್ನು ಮುನ್ನೋಡಬೇಕು. ಈ ಭೂಲೋಕವು ನಮ್ಮ ಮನೆಯಾಗಿರುವದಿಲ್ಲ. ನಾವು ಭೂಲೋಕದಲ್ಲಿ ಯಾತ್ರಿಕರೂ, ಪರದೇಶಿಗಳೂ, ಪ್ರಯಾಣಿಕರೂ, ಪರಿಚಿತ ಇಲ್ಲದವರೂ ಆಗಿದ್ದೇವೆಂಬುದನ್ನು ದಿನದಿನವೂ ಜ್ಞಾಪಿಸಿಕೊಳ್ಳತಕ್ಕದ್ದು.

ಒಂದು ಸ್ಥಳಕ್ಕಿಂತ - ಹೆಚ್ಚಾಗಿ, ಪರಲೋಕವು ಒಂದು ಪ್ರಸನ್ನತೆಯಾಗಿರುತ್ತದೆ. ಭೂಲೋಕದಲ್ಲಿ ಮನುಷ್ಯನು ದೇವರನ್ನು ನೋಡಿ ಜೀವಿಸಲಾರನು. ಪರಲೋಕದಲ್ಲಿ ನಾವು ದೇವರನ್ನು ನೋಡಬಹುದು ಮತ್ತು ದೇವರೊಂದಿಗೆ ಇರಬಹುದು ಹಾಗೂ ಜೀವಿಸಬಹುದು! ಪರಲೋಕದ ಮಹಾ ಆನಂದವು, ಸರ್ವಶಕ್ತನಾದ, ಮಿತಿಯಿಲ್ಲದ, ಬದಲಾಗದಂಥ, ನಿತ್ಯನಾದ, ಶ್ರೇಷ್ಠನಾದ, ಪರಿಶುದ್ಧನಾದ, ದೇವರ - ಅಕ್ಷರಶಃ ಸನ್ನಿಧಿಯಿಂದ ಬರುವುದು. ನಾವು ಆತನ ಜನರಾಗಿರುವೆವು; ಆತನು ನಮ್ಮ ದೇವರಾಗಿರುವನು (ಪ್ರಕಟನೆ 21:1-3).

ಒಂದು ಸ್ಥಳಕ್ಕಿಂತ ಹೆಚ್ಚಾಗಿ, ಪರಲೋಕವು ಒಬ್ಬ ವ್ಯಕ್ತಿಯಾಗಿದೆ. ಯೇಸುವು, ನನ್ನ ಕರ್ತನು ಅಲ್ಲಿರುವನು. ಅಲ್ಲಿ ದೇವಾಲಯವಿರುವದಿಲ್ಲ, ಯಾಕೆಂದರೆ ದೇವರು ಮತ್ತು ಕುರಿಮರಿಯಾದಾತನು ದೇವಾಲಯವಾಗಿರುತ್ತಾರೆ (ಪ್ರಕಟನೆ 21:22). ಕುರಿಮರಿಯಾದಾತನು ಬೆಳಕೂ ಆಗಿದ್ದಾನೆ (ಪ್ರಕಟನೆ 21:23; KJV). "ಪರಲೋಕದಲ್ಲಿ ಮನುಷ್ಯನು ಮಾಡಿದ ಕೇವಲ ಸಂಗತಿಗಳು ಯೇಸುವಿನ ಮೇಲಿರುವ

ಗಾಯದ ಕಲೆಗಳು" ಎಂದು ಯಾರೋ ಗಮನಿಸಿದ್ದಾರೆ, ನರಾವತಾರದಲ್ಲಿ, ದೇವರು ಯೇಸುವಿನಲ್ಲಿ ಮಾನವ ಕುಲದೊಂದಿಗೆ ಸೇರಿಕೊಂಡನು (ಯೋಹಾನ 1:14; ಇಬ್ರಿಯ 2:16-18; 4:14-16). ಯೇಸುವು ತಾನು ಭೂಲೋಕಕ್ಕೆ ಬರುವ ಮೊದಲು ಇದ್ದಂತೆ ಪರಲೋಕಕ್ಕೆ ಹಿಂದಿರುಗಿ ಹೋಗಲಿಲ್ಲ. ಆತನು ಪುನರುತ್ಥಾನ ಹೊಂದಿದನು, ಆತನು ಹಿಂದಿರುಗಿ ಬದಲಾಗಲಿಲ್ಲ. ನಾವು ದೇವರಾಗಿರುವದಿಲ್ಲ. ಯೇಸುವು ತಾನು ಬಿಟ್ಟು ಹೋದಂತೆ ಹಿಂದಿರುಗಿದರೆ, ಆಗ ಮಾನವ ಕುಲಕ್ಕೆ ನಿರೀಕ್ಷೆ ಇರುವದಿಲ್ಲ. ನರಾವತಾರದಲ್ಲಿ, ಯೇಸುವು ನಿತ್ಯವಾಗಿ ಮಾನವ ಕುಲವನ್ನು ಸೇರಿಕೊಂಡನು. ಆತನ ಪುನರುತ್ಥಾನದ ಕಾರಣದಿಂದ, ನಮ್ಮ ಪುನರುತ್ಥಾನಕ್ಕೆ ಭರವಸೆ ಕೊಡಲ್ಪಟ್ಟಿದೆ (ಯೋಹಾನ 11:25, 26; ರೋಮಾಪುರ 6:5; ಅಪೊಸ್ತಲರ ಕೃತ್ಯಗಳು 2:32; 1 ಪೇತ್ರ 1:3; 1 ಕೊರಿಂಥ 15:1-3, 14, 17, 19, 20-23; ರೋಮಾಪುರ 8:23).

ಮನುಷ್ಯನು ದೇವರಿಗಾಗಿ ಸೃಷ್ಟಿಸಲ್ಪಟ್ಟನು. ಪರಲೋಕಕ್ಕಾಗಿ ಸೃಷ್ಟಿಸಲ್ಪಟ್ಟನು. ಪರಲೋಕವು ಮನೆಯಾಗಿದೆ! ನಾವು ಇಲ್ಲಿಗೆ ಒಳಪಟ್ಟವರಾಗಿರದಿದ್ದರೂ, ಇದು ಕ್ರೈಸ್ತತ್ವವು ಜೀವಿಸಿದ ಕೇವಲ ಸ್ಥಳವಾಗಿದೆ. ಪರಲೋಕವು ಭೂಲೋಕದ ಮೇಲೆ ಗೆದ್ದುಕೊಳ್ಳಲ್ಪಟ್ಟಿದೆ ಇಲ್ಲವೇ ಕಳೆದುಕೊಳ್ಳಲ್ಪಟ್ಟಿದೆ. ಈಗ ನಮಗೆ ಜೀವವಿಲ್ಲದಿದ್ದರೆ, ಆಗ ಯಾವ ಜೀವವೂ ಇರುವದಿಲ್ಲ. ದೇವರು ತಾನು *ನಮಗಾಗಿ* ಸಿದ್ಧಪಡಿಸುತ್ತಿರುವದಕ್ಕಾಗಿ *ನಮ್ಮನ್ನು* ಸಿದ್ಧಪಡಿಸುತ್ತಿದ್ದಾನೆ. ಜೀವನದಲ್ಲಿ ನನ್ನ ಹಂತದಲ್ಲಿ, ಪರಲೋಕವನ್ನು ಕಳೆದುಕೊಳ್ಳಲಾರದಷ್ಟನ್ನು ಕೂಡಿಸಿಟ್ಟಿದ್ದೇನೆ. ನನ್ನ ಬಾಲ್ಯಪ್ರಾಯದಿಂದ, ಬೈಬಲಿನ ನನ್ನ ವೀರರನ್ನು ಸಂದರ್ಶಿಸಲು ನಾನು ಬಯಸಿದ್ದೇನೆ. ನಾನು ಇನ್ನೂ ಹಾಗೆ ಮಾಡುತ್ತಿರುವೆನು, ವರ್ಷಗಳಲ್ಲೆಲ್ಲಾ, ದೊಡ್ಡ ದೊಡ್ಡ ದೇವರ ಭಕ್ತರು ಇಲ್ಲಿ ಭೂಲೋಕದಲ್ಲಿ ನನ್ನನ್ನು ಆಶೀರ್ವದಿಸಿರುವರು. ದಿನದಿನವೂ ಮರಣದಿಂದ ನನ್ನ ಬಂಡವಾಳವು ಬೆಳೆಯುತ್ತಾ ಹೋಗುವುದು. ನಾನು ಮನೆಗೆ ಹೋಗಲು ಬಯಸುತ್ತೇನೆ! ಅದೆಂಥಾ ಪುನಃ ಒಂದಾಗಿರುವಿಕೆಯಾಗಿರುವುದು!

ಪರಲೋಕದಲ್ಲಿ ನಾವು ಒಬ್ಬರನ್ನೊಬ್ಬರು ತಿಳಿದಿರುವೆವೋ? *ಹೌದು!* ನಾವು ಒಬ್ಬರನ್ನೊಬ್ಬರು ತಿಳಿದಿರುವುದು ಹೇಗೆ? ನಾವು ಕೇವಲ ಸಂಖ್ಯೆಗಳಾಗಿರುವದಿಲ್ಲ! ಯಾರೂ ಒಬ್ಬರನ್ನೊಬ್ಬರು ತಿಳಿಯದಿದ್ದರೆ ಪರಲೋಕವು ಎಂಥಾ ಪ್ರಾಣಿ ಸಂಗ್ರಹ ವಾಗುವದಲ್ಲವೇ! "ನೀನು ಯಾರು?" "ನನಗೆ ತಿಳಿದಿರುವದಿಲ್ಲ." ನೀವು ಇತರರನ್ನು ತಿಳಿಯದೇ ಹೋದರೆ, ನೀವು ನಿಮ್ಮನ್ನು ತಿಳಿದುಕೊಳ್ಳಲಾರಿರಿ! ಪ್ರಾರಂಭದಿಂದಲೇ, ದೇವರು ಇಲ್ಲವೇ ಮನುಷ್ಯನು ಪ್ರತಿಯೊಂದಕ್ಕೂ ಹೆಸರನ್ನು ಇಟ್ಟನು. ದೇವರು ತಂದೆಯಾಗಿದ್ದಾನೆ: ಯೇಸುವು ಕುಮಾರನಾಗಿದ್ದಾನೆ. ದೇವದೂತರಿಗೆ ಹೆಸರುಗಳಿವೆ. ಯೇಸುವು ಮೋಶೆ ಮತ್ತು ಎಲೀಯರೊಂದಿಗೆ ಗುರುತಿಸಲ್ಪಟ್ಟನು (ಮತ್ತಾಯ 17:3-5). ನಮ್ಮಿಂದ ನಾವು ಎಂದೂ ಹೊರಟು ಹೋಗಲಾರೆವು. ನಾನು ಯಾವಾಗಲೂ ಇರುವಂಥ ಕೇವಲ ವ್ಯಕ್ತಿಯು ಹೊಡ್ಜ್ ಆಗಿರುತ್ತೇನೆ. ನಾವು ಪರಲೋಕಕ್ಕೆ ಹೋಗುವವರೆಗೆ ನಮ್ಮನ್ನಾಗಲೀ, ಇತರರನ್ನಾಗಲೀ ನಿಜವಾಗಿಯೂ ಎಂದೂ ತಿಳಿಯದಿರುವಂಥದ್ದು ಸತ್ಯವಾಗಿದೆ!

## ಪರಲೋಕವು ನನಗೆ ಇರುತ್ತದೆ

ಪರಲೋಕವು ನಾವು ಹೋಗುವಂಥ ಕೇವಲ ಸ್ಥಳವಾಗಿರುವದಿಲ್ಲ, ಆದರೆ ನಾವಾಗಿರುವಂಥ ಸ್ಥಳವಾಗಿರುತ್ತದೆ. ನಾನು ಬೇಸರಗೊಂಡಿದ್ದೇನೆ. ಅರವತ್ತೆಂಟು ವರ್ಷಗಳವರೆಗೆ ನಾನು ಸಹಿಸಿಕೊಂಡಿದ್ದೇನೆ. ನಾನು ಪ್ರತೀ ದಿನ ಪಾಪಮಾಡಿ, ಕಡಿಮೆಯಾಗುತ್ತ ಹೋಗುತ್ತಿದ್ದೇನೆ, "ಮನಸ್ಸು ಸಿದ್ಧವಾಗಿದೆ ಸರಿ, ಆದರೆ ದೇಹಕ್ಕೆ ಬಲಸಾಲದು" (ಮತ್ತಾಯ

26:41ಬ). ಆಯಾಸಗೊಂಡಿರುವದರ ಬಗ್ಗೆ ನಾನು ಆಯಾಸ ಗೊಂಡಿದ್ದೇನೆ. ಯೇಸುವಿನಂತಿರುವದಕ್ಕಾಗಿ ನಾನು ಬಹಳ ಪ್ರಯತ್ನಿಸುತ್ತೇನೆ, ಆದರೆ ದುಃಖಕರ ವಾಗಿ ಸೋತು ಹೋಗುತ್ತೇನೆ. ಪರಲೋಕವು ಅದನ್ನು ಬದಲಾಯಿಸುವುದು, ಯಾಕೆಂದರೆ ಪರಲೋಕವು *ನನ್ನನ್ನು* ಬದಲಾಯಿಸುವುದು. *ಹಲ್ಲೆಲೂಯ!* "ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು" (1 ಯೋಹಾನ 3:2ಬ). *ದೇವರಿಗೆ ಮಾತ್ರವೇ ಮಹಿಮೆಯಾಗಲಿ!*

> ನಾವು ಪರಲೋಕವನ್ನು ತಲುಪುವ ಮೊದಲು ಪರಲೋಕವು ನಮ್ಮನ್ನು ತಲುಪುತ್ತದೆ.
> ವಿಶ್ವಾಸಿಗಳು ಪರಲೋಕದಲ್ಲಿರುವ ಮೊದಲು ಪರಲೋಕವು ವಿಶ್ವಾಸಿಗ ಳಲ್ಲಿರುತ್ತದೆ.
>
> ನಾನು ಯೇಸುವಾಗಿರುವದಿಲ್ಲ, ಆದರೆ ನಾನು ಆತನಂತೆ ಇರುವೆನು.

***ಬನ್ನಿರಿ, ನನ್ನೊಂದಿಗೆ ನಡೆಯಿರಿ.***

---

ಟಿಪ್ಪಣಿಗಳು

[1]William Cowper, "God Moves in a Mysterious Way," *Songs of Faith and Praise,* comp. and ed. Alton H. Howard (West Monroe, La.: Howard Publishing Co., 1994). [2]Richard N. Ostling et al., "Does Heaven Exist?" *Time* (24 March 1997), 70-78. [3]Lanny Henninger, "Reflections," *Outreach,* University Avenue church of Christ, Austin, Texas (28 October 1990).

© 2009 Truth for Today